ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.

**O.S. No.333/2018. P.W.-1.**

ದಿನಾಂಕಃ**22.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಸಿ ಬಿ ವಕೀಲರಿಂದಃ-

ನಾನು ದಿನಾಂಕ 12.12.1958 ರಂದು ಜನಿಸಿರುತ್ತೇನೆ ಎಂದರೆ ಸರಿ. ಈಗ ನೋಡುತ್ತಿರುವ ಶಾಲಾ ದಾಖಲೆ ನನಗೆ ಸಂಬಂಧಪಟ್ಟ ದಾಖಲೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿಯು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ನನ್ನ ಮದುವೆಯ ಕಾಲಕ್ಕೆ ನನ್ನ ತಂದೆ-ತಾಯಿಯವರು ನನಗೆ ಏನನ್ನು ಸಹ ಕೊಟ್ಟಿರುವುದಿಲ್ಲ. ನನ್ನ ಮದುವೆಗೆ ಎಷ್ಟು ಖರ್ಚು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಗಂಡನ ಜೊತೆ ಮದುವೆಯ ನಂತರ ಸಂಸಾರ ಮಾಡಿರುವುದಿಲ್ಲ. ನನ್ನ ತಂದೆ-ತಾಯಿಗೆ ನಾನು ಒಬ್ಬಳೇ ಮಗಳಾಗಿದ್ದರಿಂದ ನನ್ನ ಮೊದಲನೆ ಮದುವೆಯ ಕಾಲಕ್ಕೆ ನನ್ನ ಮೊದಲನೆ ಗಂಡನಿಗೆ 150 ಗ್ರಾಂ ಚಿನ್ನದ ಸರ, 1 ಲಕ್ಷ ವರದಕ್ಷಿಣೆ ಹಣ ನೀಡಿದ್ದರು ಎಂದರೆ ಸರಿಯಲ್ಲ. ನನ್ನ ಮದುವೆಯ ಕಾಲಕ್ಕೆ ನನ್ನ ಕುಟುಂಬದ ಎಲ್ಲಾ ಆಸ್ತಿಗಳು ವಿಭಾಗವಾಗಿತ್ತು ಎಂದರೆ ಸರಿಯಲ್ಲ.

ನಂತರ, ನಾನು ಸೋಮನಹಳ್ಳಿ ಶಿವಣ್ಣ ನನ್ನು 2 ನೇ ಮದುವೆಯಾಗಿರುತ್ತೇನೆ. ನನಗೆ ಮತ್ತು ಶಿವಣ್ಣರಿಗೆ ಒಂದು ಹೆಣ್ಣು ಮಗು ಇದೆ ಎಂದರೆ ಸರಿ. ಶಿವಣ್ಣನಿಗೆ 2 ಎಕರೆ ಆಸ್ತಿ ಇದೆ. ಶಿವಣ್ಣ ಈಗ ಜೀವಂತವಿಲ್ಲ. ಸದರಿ 2 ಎಕರೆ ಆಸ್ತಿಯನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ಗಂಡನ ತಮ್ಮ ನೋಡಿಕೊಳ್ಳುತ್ತಿದ್ದಾನೆ. ಸದರಿ 2 ಎಕರೆಯಲ್ಲಿ ನನಗೆ ಹಕ್ಕು ಇದೆ.

ಪಿತ್ರಾರ್ಜಿತ - ಸ್ವಯಾರ್ಜಿತ ಆಸ್ತಿಗಳ ನಡುವಿನ ವ್ಯತ್ಯಾಸ ನನಗೆ ಗೊತ್ತು. ನನ್ನ ತಾತಾ ದಾವಾ ಸ್ವತ್ತುಗಳನ್ನು ಖರೀದಿ ಮಾಡಿರುತ್ತಾರೆ ಎಂದು ತೋರಿಸಲು ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಿಪಿ 1 ರಿಂದ 3 ರ ಪಹಣಿಗಳಲ್ಲಿ ನನ್ನ ತಾಯಿ ಮತ್ತು ನನ್ನ ತಮ್ಮನ ಹೆಸರಿಗೆ ಜಂಟಿ ಖಾತೆ ಇದೆ ಎಂದರೆ ಸರಿ. ನನ್ನ ತಾಯಿ-ತಂದೆಯ ಜೀವಿತಕಾಲದಲ್ಲಿ ಅವರ ಯೋಗಕ್ಷೇಮವನ್ನು ಹಾಗೂ ಅವರ ಮರಣದ ಕಾಲಕ್ಕೆ ಎಲ್ಲಾ ಅಂತ್ಯಕ್ರಿಯೆ ಮತ್ತು ಸಂಪ್ರಾದಾಯ ಕಾರ್ಯಗಳನ್ನು ನನ್ನ ತಮ್ಮ ಅಂದರೆ 2 ನೇ ಪ್ರತಿವಾದಿ ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆ-ತಾಯಿ ಸುಮಾರು 40 ವರ್ಷಗಳ ಹಿಂದೆಯೇ ನನ್ನ ಮದುವೆಯನ್ನು ನನ್ನ ಮಾವನಿಗೆ ಕೊಟ್ಟು ಮಾಡಿದ್ದು, ನಾನು ಸದರಿ ಮದುವೆಯನ್ನು

ತಿರಸ್ಕರಿಸಿ ನಾನು ಬೇರೆ ಮದುವೆಯಾದಾಗಿನಿಂದಲೂ ನಾನು ನನ್ನ ತಂದೆ-ತಾಯಿಯೊಂದಿಗೆ ಮಾತನಾಡಿರುವುದಿಲ್ಲ ಹಾಗೂ ಅವರ ಮರಣದ ಕಾಲ್ಕೆ ಅವರ ಶವ ನೋಡಲು ಸಹಃ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೋಗಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ನನ್ನ ತಂದೆ ಬದುಕಿದ್ದಾಗಲೇ ವಿಭಾಗ ಕೊರಲು ನನಗೆ ತೊಂದರೆ ಇರಲಿಲ್ಲ.

ನನ್ನ ತಂದೆಯವರ ಬಳಿ ನಾನು ಆಸ್ತಿ ಕೇಳಿದ್ದು, ಆಗ ನನ್ನ ತಂದೆಯು ನೀನು ಮನೆ ಬಿಟ್ಟು ಹೋದ ನಂತರ ನಿನಗೆ ಯಾವುದೇ ಆಸ್ತಿ ನೀಡುವುದಿಲ್ಲ ಇದು ನನ್ನ ಸ್ವಯಾರ್ಜಿತ ಆಸ್ತಿ ಎಂದು ತಿರಸ್ಕರಿಸಿದರು ಎಂದರೆ ಸರಿಯಲ್ಲ. ನಾನು ನನ್ನ ತಂದೆ-ತಾಯಿಯನ್ನು ಯಾವತ್ತು ಸಹ ನೋಡಿಕೊಳ್ಳದೆ ಅವರು ಮೃತಪಟ್ಟ ನಂತರ ಆಸ್ತಿ ಲಪಟಾಯಿಸುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ನನಗೆ ಮತ್ತು 2 ನೇ ಪ್ರತಿವಾದಿಗೆ ಯಾವುದೇ ಪಿತ್ರಾರ್ಜಿತ ಆಸ್ತಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿಪಿ 1 ರ ಕಾಲಂ 10 ರಲ್ಲಿ ಪಿತ್ರಾರ್ಜಿತ ಎಂದು ನಾನೇ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ನ್ನು ಹೊರತುಪಡಿಸಿ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಬೇರೆ ಯಾವುದೇ ಮೂಲ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಈ ದಾವೆಯಲ್ಲಿ ಕೇಳಿರುವಂತೆ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ನನ್ನ ತಂದೆ ಅವರ ಸ್ವಂತವಾಗಿ ನಡೆಸುತ್ತಿದ್ದ ತೆಂಗಿನಕಾಯಿ ವ್ಯಾಪಾರದಿಂದ ಬಂದ ಆದಾಯದಿಂದ ಖರೀದಿಸಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸದರಿ ಸ್ವತ್ತುಗಳನ್ನು ಸಾಲ ಪಡೆದು ಅಭಿವೃದ್ಧಿ ಪಡಿಸಿ ಅವರೇ ಸ್ವಾಧೀನದಲ್ಲಿ ಇದ್ದು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.